<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

ಓ.ಎಸ್ ಸಂಖ್ಯೆ. **140/*2023*** ಡಿ.ಡಬ್ಲೂ .1

ದಿನಾಂಕಃ 14-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-

ನನ್ನ ತಾತನ ಹೆಸರು ವೆಂಕಟರಮಣಪ್ಪ. ಅವರಿಗೆ ಬಾಲಪ್ಪ ಮತ್ತು ವೆಂಕಟೇಶಪ್ಪ ಎಂಬ ಇಬ್ಬರು ಮಕ್ಕಳು. ಬಾಲಪ್ಪನವರಿಗೆ ಲಕ್ಷೀನಾರಾಯಣ ಮತ್ತು ನಾನು ಇಬ್ಬರು ಮಕ್ಕಳು. ವೆಂಕಟೇಶಪ್ಪನವರಿಗೆ ವೇಣುಗೋಪಾಲ್ ಮತ್ತು ವಿಜಯಾನಂದ ಎಂಬ ಇಬ್ಬರು ಮಕ್ಕಳು. ನನ್ನ ತಾತ ಕೈ ಮಗ್ಗ ಮತ್ತು ವ್ಯವಸಾಯದ ಕೆಲಸ ಮಾಡುತ್ತಿದ್ದರು. ಸದರಿ ಕೆಲಸದಿಂದ ಎಷ್ಟು ಆಧಾಯ ಬರುತ್ತಿತ್ತು ಎಂದು ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಹೇಳಿರುವ ಶೇಷಾದ್ರಪ್ಪ ನನ್ನ ತಾತನ ಸಂಬಂಧಿ ಮತ್ತು ಸ್ನೇಹಿತರು.  ಅವರುಗಳು ಸರ್ವೆ ನಂ. 118  3 ಎಕರೆ 19 ಗುಂಟೆ ಜಮೀನನ್ನು ದಿನಾಂಕಃ 19-08-1965 ರಂದು ಜಂಟಿಯಾಗಿ ಖರೀದಿಸಿದ ಕಾಲಕ್ಕೆ ನನಗೆ 3 ವರ್ಷ ವಯಸ್ಸು ಇರಬಹುದು. ನನ್ನ ತಾತ ಮತ್ತು ಶೇಷಾದ್ರಪ್ಪನವರು ಸದರಿ ಆಸ್ತಿಯನ್ನು ಭಾಗ ಮಾಡಿಕೊಂಡಿಲ್ಲ. ನಾನು ಪ್ರಮಾಣ ಪತ್ರದಲ್ಲಿ ಅವರಿಬ್ಬರು ತಲಾ 1-29 ವರೆ ಗುಂಟೆ ಯಂತೆ ಹಂಚಿಕೆ ಮಾಡಿಕೊಂಡಿರುತ್ತಾರೆಂದು ಹೇಳಿರುತ್ತೆನೆಂದರೆ ನಮಗೆ 1-29 ವರೆ ಗುಂಟೆ ಬರಬೇಕು ಎಂದು ನುಡಿಯುತ್ತಾರೆ. ಸದರಿ 3-19 ಗುಂಟೆ ವಿಸ್ತೀರ್ಣ ನನ್ನ ಹೆಸರಿನಲ್ಲಿ ಖಾತೆ ಆಗಿದೆ. ಸದರಿ ಖಾತೆ ಎ.ಸಿ ರವರ ಆದೇಶದ ಮೇರೆಗೆ ಆಗಿರುತ್ತದೆ. ನನ್ನ ತಾತ 1975 ರಲ್ಲಿ ಮರಣ ಹೊಂದಿರುತ್ತಾರೆ. ಆಗ

ನನಗೆ ಸುಮಾರು 12-13 ವರ್ಷ ವಯಸ್ಸಾಗಿತ್ತು. ಅವರು ಮರಣ ಹೊಂದುವ ಕಾಲಕ್ಕೆ ಅವರಿಗೆ ಅಸ್ತಮ ಕಾಯಿಲೆ ಇತ್ತು. ನನಗೆ 1967 ರಲ್ಲಿ ವಿಲ್ ಮಾಡಿದ್ದು ದಿನಾಂಕ ಗೊತ್ತಿಲ್ಲ.

ಸದರಿ ವಿಲ್ ಬರೆದ ಬಗ್ಗೆ ಗ್ರಾಮಸ್ಥರು ತಿಳಿಸಿರುತ್ತಾರೆ. ಸದರಿ ವಿಲ್ ನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸದರಿ ವಿಲ್ ನ ಅಸಲು ಪ್ರತಿಯನ್ನು ಹಾಜರು ಮಾಡಿಲ್ಲ. ಅದರ ಅಸಲು ಪ್ರತಿ ಎಲ್ಲಿರುತ್ತದೆಯೋ ಗೊತ್ತಿಲ್ಲ.

ನಮ್ಮ ತಾತನ ಮರಣ ನಂತರ ಪ್ರೋಬೇಟ್ ಗಾಗಿ ಯಾವುದೇ ದಾವೆ ಸಲ್ಲಿಸಿಲ್ಲ. ನಾನು ಎ.ಸಿ ನ್ಯಾಯಾಲಯದಲ್ಲಿ ಖಾತೆ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದ್ದೇನೆಂದರೆ ಹೌದು. ಸದರಿ ಪ್ರಕರಣದಲ್ಲಿರುವ ಜಯಮ್ಮ ನನ್ನ ತಾಯಿ. ವಾದಿಯರನ್ನು ಸದರಿ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಈ ನೋಡುತ್ತೀರುವ ದಾಖಲೆ ಸದರಿ ನ್ಯಾಯಾಲಯದ ಅರ್ಜಿ ಎಂದರೆ ಹೌದು. ಸದರಿ ದಾಖಲೆಯನ್ನು ನಿಪಿ.73-74 ಎಂದು ಗುರುತಿಸಲಾಯಿತು. ಸದರಿ ಅರ್ಜಿಯನ್ನು ವಿಲ್ ಪ್ರಕಾರ ಖಾತೆ ಮಾಡುವಂತೆ ಸಲ್ಲಿಸಿದ್ದೇನೆ ಎಂದರೆ ಹೌದು. ಈಗ ನೋಡುತ್ತಿರುವ ದಾಖಲೆಯಂತೆ ಜಯಮ್ಮ ರವರು ಡಿ.ಸಿ ನ್ಯಾಯಾಲಯದಲ್ಲಿ ಅಪೀಲೂ ಸಲ್ಲಿಸಿರುತ್ತಾರೆ ಎಂದರೆ ಹೌದು. ಸದರಿ ದಾಖಲೆಯನ್ನು ನಿಪಿ.75-76 ಎಂದು ಗುರುತಿಸಲಾಯಿತು.

ನನ್ನ ತಾತನವರು ನಮಗೆ ಯಾವುದೇ ವಿಲ್ ನ್ನು ಮಾಡಿಲ್ಲ ಎಂದರೆ ಸುಳ್ಳು. ಸದರಿ ವಿಲ್ ಗೆ ಸಾಕ್ಷಿಯಾಗಿರುವ ಎಸ್. ರಾಮಯ್ಯ ನವರು ಮರಣ ಹೊಂದಿರುತ್ತಾರೆ. ಸದರಿ ವಿಲ್ ನ್ನು ನಾನು ಮತ್ತು ನನ್ನ ಅಣ್ಣ ಸೃಷ್ಟಿಸಿರುತ್ತೇವೆ ಎಂದರೆ ಸುಳ್ಳು. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ಸುಳ್ಳು. ಅದು ನಮ್ಮ ತಾತನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣದಿಂದ ಸದರಿ ವಿಲ್ ನ್ನು ಸೃಷ್ಟಿಸಿರುತ್ತೇವೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.